**ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಘನ ನ್ಯಾಯಾಲಯ ಬ್ಯಾಡಗಿ.**
**ಕ್ರಿಮಿನಲ್ ಪ್ರಕರಣ ಸಂಖ್ಯೆ 144/2019**

ಪಿಡಬ್ಲ್ಯೂಃ 2

ಸಿಡಬ್ಲ್ಯೂಃ 2

ಹೆಸರು : ಕೃಷ್ಣಪ್ಪ ತಂದೆಃ ಸಿದ್ದಪ್ಪ ನೆಗಳೂರು

ವಯಸ್ಸು : 35 ವರ್ಷ

ಉದ್ಯೋಗ : ಕ್ಷೌರಿಕ

ವಾಸಸ್ಥಳ : ಬ್ಯಾಡಗಿ

ದಿನಾಂಕ : 02.06.2022 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ :**

1) ದಿಃ 20.12.2018 ರಂದು ಬ್ಯಾಡಗಿ ಠಾಣೆ, ಪೋಲೀಸರು ಸದರಿ ಪ್ರಕರಣದಲ್ಲಿ ನನ್ನನ್ನು ಮತ್ತು ಚಾಸಾ-3 ರವರನ್ನು ಘಟನಾ ಸ್ಥಳದ ಪಂಚನಾಮೆಗೆ ಸಾಕ್ಷಿದಾರರಾಗುವಂತೆ ಬರಲು ತಿಳಿಸಿದ್ದರಿಂದ ನಾವು ಪಂಚನಾಮೆಗೆ ಸಾಕ್ಷಿದಾರರಾಗಿ ತೆರಳಿರುತ್ತೇವೆ. ಘಟನಾ ಸ್ಥಳದಲ್ಲಿ ಚಾಸಾ-1 ರವರು ಪೋಲೀಸರಿಗೆ ತನ್ನ ಅಂಗಡಿಯಲ್ಲಿ ಕಳುವು ಆದ ಬಗ್ಗೆ ಮಾಹಿತಿಯನ್ನು ನೀಡಿದ್ದು, ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಮಧ್ಯಾಹ್ನ 03-30 ರಿಂದ 04-30 ರ ವರೆಗೆ ಘಟನಾ ಸ್ಥಳದ ಪಂಚನಾಮೆಯನ್ನು ತಯಾರಿಸಿರುತ್ತಾರೆ. ಸದರಿ ಪಂಚನಾಮೆಯನ್ನು ತಯಾರಿಸುವ ಕಾಲಕ್ಕೆ ಘಟನಾ ಸ್ಥಳದ ಹಾತ್ ನಕಾಶೆ ಮತ್ತು ಭಾವಚಿತ್ರಗಳನ್ನು ತೆಗೆದಿರುತ್ತಾರೆ.

2) ಸದರಿ ಘಟನಾ ಸ್ಥಳದ ಪಂಚನಾಮೆ ಈಗಾಗಲೇ ನಿಪಿ-2 ಎಂದು ಗುರುತಿಸಲ್ಪಟ್ಟಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು, ಸಾಕ್ಷಿಯು ನಿಪಿ-3 ಕಚ್ಚಾ ನಕಾಶೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಘಟನಾ ಸ್ಥಳದ ಭಾವಚಿತ್ರಗಳು ಈಗಾಗಲೇ ನಿಪಿ-4 ರಿಂದ ನಿಪಿ-9 ಎಂದು ಗುರುತಿಸಲ್ಪಟ್ಟಿದ್ದು,ಸಾಕ್ಷಿಯು ಸದರಿ ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-4 ನ್ನು ಪೋಲೀಸರು ಬರೆದು ನನಗೆ ಮತ್ತು ಚಾಸಾ-3 ರವರಿಗೆ ಓದಿ ಹೇಳಿರುತ್ತಾರೆ.

3) ಆರೋಪಿತರು ಕೃತ್ಯಕ್ಕೆ ಬಳಸಿದ ಕಬ್ಬಿಣದ ರಾಡುಗಳನ್ನು ಮತ್ತು ಸ್ಕ್ರೂಡ್ರೈವರನ್ನು ಹಾಗೂ ಬೀಗವನ್ನು ಪೋಲೀಸರು ಜಪ್ತುಪಡಿಸಿಕೊಂಡಿರುತ್ತಾರೆ. ಸದರಿ ಮು. ಮಾಗಳನ್ನು ಈಗಾಗಲೇ ಮು.ಮಾ-1 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿಯು ಸದರಿ ಮು.ಮಾ-1 ನ್ನು ನೋಡಿ ಗುರುತಿಸಿರುತ್ತಾರೆ.

4) ದಿನಾಂಕಃ 27.12.2018 ರಂದು ಬ್ಯಾಡಗಿ ಪೋಲೀಸರು ಪೋಲೀಸ್ ಠಾಣೆಗೆ ನನ್ನನ್ನು ಮತ್ತು ಚಾಸಾ-4 ರವರನ್ನು ಬರಹೇಳಿದ್ದರಿಂದ ನಾವು ಠಾಣೆಗೆ ಹಾಜರಾಗಿ ಚಾಸಾ-8 ರವರು ಹಾಜರುಪಡಿಸಿದ ಈ ಪ್ರಕರಣದಲ್ಲಿ ಕಳುವು ಮಾಡಿದ ನೀಲಿ ಬಣ್ಣದ ರೆಡ್ ಮಿ ಕಂಪನಿಯ ಆರ್.ಎ ಮೊಬೈಲನ್ನು ಹಾಜರುಪಡಿಸಲು ಠಾಣೆಯಲ್ಲಿ ಬೆಳಗ್ಗೆ 11-00 ರಿಂದ 11-45 ರ ನಡುವಿನ ಅವಧಿಯಲ್ಲಿ ಪಂಚನಾಮೆಯನ್ನು ತಯಾರಿಸಿರುತ್ತಾರೆ. ಸಾಕ್ಷಿಯ ಸದರಿ ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದಅವುಗಳನ್ನು ಕ್ರಮವಾಗಿ ನಿಪಿ-24 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-24(ಎ) ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸ ಅದೆ.

ಸಹಿ/-

ಜೆಎಂಎಫ್‌ಸಿ, ಬ್ಯಾಡಗಿ.